# ಮೌನಿಯ ಒಟಿಟಿ ಪ್ರೀತಿ



ಬಾಲಿವುಡ್ ನಿಧಾನಕ್ಕೆ ಮರಳಿ ಫಾರ್ಮ್‌ಗೆ ಬರುತ್ತಿದೆ. ನಟ ನಟಿಯರು ಒಬ್ಬೊಬ್ಬರಾಗಿ ಶೂಟಿಂಗ್‌ಗೆ ಮರಳಿದ್ದಾರೆ. ಅಕ್ಷಯ ಕುಮಾರ್, ಅಮಿತಾಭ್ ಬಚ್ಚನ್, ದೀಪಿಕಾ ಪಡುಕೋಣೆ, ರಣವೀರ್ ಸಿಂಗ್, ಅಲಿಯಾ, ಜಾನ್ ಅಬ್ರಹಾಂ ಮುಂತಾಗಿ ಶೂಟಿಂಗ್, ಡಬ್ಬಿಂಗ್, ಚಟುವಟಿಕೆಗಳಲ್ಲಿ ತೊಡಗಿರುವವರು ತಮ್ಮ ಫೋಟೊಗಳನ್ನು ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತಿದ್ದಾರೆ. ಹೊಸ ಸಿನಿಮಾಗಳ ಶೂಟಿಂಗ್‌ಗಿಂತ ಹೆಚ್ಚಾಗಿ, ಹಳೆಯ ಚಿತ್ರಗಳ ಶೂಟಿಂಗ್, ಡಬ್ಬಿಂಗ್ ಮತ್ತು ಪೋಸ್ಟ್ ಪ್ರೊಡಕ್ಷನ್ ಕೆಲಸಗಳೇ ಹೆಚ್ಚು ನಡೆಯುತ್ತಿವೆ.

ಈ ಮಧ್ಯೆ ಮೌನಿ ರಾಯ್ ತಮ್ಮ ಸಿನಿಮಾದ ಒಟಿಟಿ ಫ್ಲಾಟ್‌ಫಾರಂ ಬಿಡುಗಡೆಯ ಬಗ್ಗೆ ಮಾತನಾಡಿದ್ದಾರೆ. ''ಥಿಯೇಟರ್‌ಗಳು ತೆರೆಯುವುದನ್ನು ಕಾದು ಕುಳಿತುಕೊಳ್ಳಲಾಗದು. ಎಲ್ಲರನ್ನೂ ಸಿನಿಮಾ ತಲುಪಲಿ ಎಂದು ಬಯಸುವ ಕಾಲ ಇದಲ್ಲ. ನಾನು ನಟಿಸಿದ 'ಲಂಡನ್ ಕಾನ್ಫಿಡೆನ್ಸಿಯಲ್' ಒಟಿಟಿಯಲ್ಲಿ ಬಿಡುಗಡೆ ಆಗಿದ್ದಕ್ಕೆ ನನ್ನ ಬೆಂಬಲವಿದೆ' ಎಂದು ಮೌನಿ ರಾಯ್ ಹೇಳಿದ್ದಾರೆ.

ಈ ಚಿತ್ರದಲ್ಲಿ ಮೌನಿಗೆ ಗೂಢಚಾರಿಣಿಯ ಪಾತ್ರ. ಭಾರತದ ವಿರುದ್ಧ ಚೀನಾ ನಡೆಸುವ ಸಂಚೊಂದನ್ನು ಬಯಲಿಗೆಳೆಯುವ ಸಾಹಸದ ಕಥೆ. ಕೊರೊನಾ ವೈರಸ್ ಸ್ಫೋಟಿಸಲು ಕಾರಣವಾದ ಚೀನಾದ ಸಂಚಿನ ಸುತ್ತ ಕಥೆ ಹೆಣೆದುಕೊಂಡಿದೆ. ಝೀ5 ಒಟಿಟಿ ವೇದಿಕೆಯಲ್ಲಿ ಈ ಚಿತ್ರ 190 ದೇಶಗಳಲ್ಲಿ ಬಿಡುಗಡೆಯಾಗಿದೆ. 'ಬಾಲಿವುಡ್‌ಗೆ ಬಂದು 12 ವರ್ಷಗಳಾದವು. ಈವರೆಗೆ ಇಂತಹ ಥ್ರಿಲ್ಲರ್ ಕಥೆಯುಳ್ಳ ಪಾತ್ರ ನನಗೆ ಸಿಕ್ಕಿರಲಿಲ್ಲ' ಎಂದಿದ್ದಾರೆ ಆಕೆ. ಟಿವಿ ಧಾರವಾಹಿಗಳಲ್ಲಿ ಪ್ರತಿಭೆ ಪ್ರದರ್ಶಿಸಿ ಬಳಿಕ ಬಾಲಿವುಡ್‌ಗೆ ಬಂದಿರುವ ಮೌನಿಗೆ ಹ್ಯಾರಿ ಪೋಟರ್ ಸರಣಿಯೆಂದರೆ ಅಚ್ಚುಮೆಚ್ಚಂತೆ. ರಣವೀರ್, ಅಲಿಯಾ ಮತ್ತು ಅಮಿತಾಭ್ ನಟಿಸಿರುವ ಅಯಾನ್ ಮುಖರ್ಜಿಯ 'ಬ್ರಹ್ಮಾಸ್ತ್ರ'ದಲ್ಲೂ ಮೌನಿಗೆ ಪ್ರಮುಖ ಪಾತ್ರವಿದೆ. ಆ ಚಿತ್ರದ ಅಂತಿಮ ಹಂತದ ಶೂಟಿಂಗ್ ನಡೆದಿದ್ದು, ಚಿತ್ರ ಬಿಡುಗಡೆಯಾಗುವ ಹೊತ್ತಿಗೆ ಥಿಯೇಟರ್‌ಗಳು ತೆರೆದಿರುತ್ತವೆ ಎನ್ನುವ ವಿಶ್ವಾಸ ಆಕೆಯದ್ದು. ■



# ಕಿಯಾರಾ ಇನ್ ಲವ್

ಕಿಯಾರಾ ಆಡ್ವಾಣಿ ಮತ್ತು ಸಿದ್ಧಾರ್ಥ ಮಲ್ಹೋತ್ರಾ ಮಧ್ಯೆ ಪ್ರೀತಿ ಚಿಗುರಿದ್ದು ಈಗ ಹೆಮ್ಮರವಾಗಿದೆ ಎನ್ನುವುದು ಬಾಲಿವುಡ್ ಅನುಮಾನ, ಅದಕ್ಕೆ ತಕ್ಕಂತೆ ಆಕೆ ಸಿದ್ಧಾರ್ಥನ ಜೊತೆಗೆ ನಿಕಟವಾಗಿರುವ ಫೋಟೊಗಳು ಸಿಗುತ್ತಿವೆ. ಕಳೆದ ವಾರ ಮುಖಕ್ಕೆ ಮಾಸ್ಕ್ ಕಟ್ಟಿಕೊಂಡು ಸಿದ್ಧಾರ್ಥನ ಮನೆಗೆ ಹೋಗುತ್ತಿದ್ದ ಕಿಯಾರಾ, ಫೋಟೊಗ್ರಾಫರ್ ಕಣ್ಣು ತಪ್ಪಿಸಲು ಯತ್ನಿಸಿದ್ದು ಸುದ್ದಿಯಾಗಿದೆ. ಇವರಿಬ್ಬರ ಓಡಾಟ ಪ್ರೀತಿಯ ಹಂತ ದಾಟಿದ್ದು ರಿಲೇಷನ್‌ಷಿಪ್ ಬೆಳೆದಿದೆ ಎನ್ನುವ ಸುದ್ದಿಯೂ ಇದೆ.

ಈ ಹಿಂದೆ ಸಿದ್ಧಾರ್ಥನ ಬರ್ತ್‌ಡೇ ಪಾರ್ಟಿಯಲ್ಲಿ ಕಿಯಾರಾ ಆಡ್ವಾಣಿ ವಿಶೇಷ ಅತಿಥಿಯಾಗಿದ್ದಳು ಎನ್ನುವುದು ಸುದ್ದಿಯಾಗಿತ್ತು. ಆ ಬಳಿಕ ಕಿಯಾರಾಳ ಬರ್ತ್‌ಡೇ ಪಾರ್ಟಿಯಲ್ಲಿ ಸಿದ್ಧಾರ್ಥ ಮಿಂಚಿದ ಫೋಟೊಗಳು ಬಂದವು. ಅದಕ್ಕೂ ಮುನ್ನ ಅಲಿಯಾ ಭಟ್ ಮನೆಯಲ್ಲಿ ಸಿದ್ಧಾರ್ಥ ಮತ್ತು ಕಿಯಾರಾ ಒಟ್ಟಾಗಿ ಪಾರ್ಟಿ ಮಾಡಿದ್ದೂ ಗೊತ್ತಾಗಿತ್ತು. ಪತ್ರಕರ್ತರು ಪ್ರಶ್ನಿಸಿದರೆ 'ಸಹನಟನ ಜೊತೆಗೆ ಓಡಾಡುವುದರಲ್ಲಿ ವಿಶೇಷವೇನಿದೆ?' ಎಂದಿದ್ದಾಳೆ.

ಸದ್ಯಕ್ಕೆ ಕಿಯಾರಾಗೆ ಬಾಲಿವುಡ್‌ನಲ್ಲಿ ಕೈತುಂಬ ಕೆಲಸವಿದೆ. ಕೊರೊನಾ ರಜೆಯ ಅವಧಿಯಲ್ಲಿ ಆಕೆ ನಟಿಸಿದ ಸಿನಿಮಾಗಳು ನೆಟ್‌ಫ್ಲಿಕ್ಸ್‌ನಲ್ಲೂ ಬಿಡುಗಡೆ ಕಂಡಿವೆ. ಆಕ್ಷನ್ ಸಿನಿಮಾಗಳ ನಿರ್ದೇಶಕ ರೋಹಿತ್ ಶೆಟ್ಟಿಯ 'ಸೂರ್ಯವಂಶಿ' ಆಕೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿರುವ ಸಿನಿಮಾ. ನವೆಂಬರ್‌ನಲ್ಲಿ ಈ ಸಿನಿಮಾ ತೆರೆ ಕಾಣಲಿದೆ ಎಂದು ಈಗಾಗಲೆ ಪ್ರಕಟಿಸಲಾಗಿದೆ. ಅಕ್ಷಯ್ ಕುಮಾರ್ ಜೊತೆಗೆ ನಟಿಸಿರುವ 'ಲಕ್ಷ್ಮೀ ಬಾಂಬ್' ಈಕೆಯ ಇನ್ನೊಂದು ಮಹತ್ವಾಕಾಂಕ್ಷೆಯ ಚಿತ್ರ. ಕೊರೊನಾ ಅಲ್ಲವಾಗಿದ್ದಲ್ಲಿ ಕಳೆದ ಮೇನಲ್ಲಿ ಚಿತ್ರ ಬಿಡುಗಡೆ ಆಗಬೇಕಿತ್ತು. ಈಗ ಚಿತ್ರವನ್ನು ನವೆಂಬರ್ 9ರಂದು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್‌ನಲ್ಲಿ ಬಿಡುಗಡೆ ಮಾಡುವುದಾಗಿ ನಿರ್ಮಾಪಕರು ಹೇಳಿದ್ದಾರೆ. ತಮಿಳಿನಲ್ಲಿ ಸೂಪರ್‌ಹಿಟ್ ಆದ 'ಮುನಿ 2: ಕಾಂಚನಾ' ಚಿತ್ರದ ರಿಮೇಕ್ ಇದು. ಈ ಚಿತ್ರದ ನಿರ್ದೇಶನದ ಮೂಲಕ ರಾಘವ ಲಾರೆನ್ಸ್ ಬಾಲಿವುಡ್‌ಗೆ ಕಾಲಿಟ್ಟಿದ್ದಾರೆ. ವೃತ್ತಿಜೀವನದಲ್ಲಿ ಕಿಯಾರಾ ಸಿದ್ಧಾರ್ಥನಿಗಿಂತಲೂ ಮುಂಚೂಣಿಯ ಓಟದಲ್ಲಿರುವುದು ವಿಶೇಷ.

■ ಬಿಂದು